ಮಾತ್ರವಲ್ಲ. ಈ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ದೊರಕಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಭೀಮಾ ಅಥವಾ ಬೆಣ್ಣೆತೊರೆ ಯೋಜನೆಗಳನ್ನು ಜಾರಿಗೆ ಕೂಡಲೇ ತನ್ನಿ ಎಂದು ನಾಗರೀಕರು ಒತ್ತಾಯಪಡಿಸುತಿದ್ದಾರೆ. ಇದನ್ನು ಇತ್ಯರ್ಥ ಮಾಡದಿದ್ದಲ್ಲಿ ಚಳುವಳಿ ಹೂಡಬೇಕೆಂದು ಎಚ್ಚರಿಕೆ ನೀಡಿದ್ದಾರೆ. ಈ ಗಂಭೀರ ಸಮಸ್ಯೆಯ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ಹೇಳಿಕೆ ನೀಡಿ, ಜನರ ಕೇಳಿಕೆಯನ್ನು ಈಡೇರಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ನಗರಾಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳು ಹಾಗೂ ನಾಗರೀಕ ಸರಬರಾಜು ಮಂತ್ರಿಗಳು) — ಮಾನ್ಯ ಅಧ್ಯಕ್ಷರೇ, ಅಲ್ಲಿ ನೀರಿನ ತೊಂದರೆ ಇದೆ ನಿಜ. ಅದನ್ನು ಸರಿಪಡಿಸುವುದಕ್ಕೆ ಎಲ್ಲಾ ಪ್ರಯತ್ನ ಮಾಡಿ ಹಣಕಾಸಿನ ವ್ಯವಸ್ಥೆಯನ್ನು ಮಾಡುತ್ತಾ ಬಂದಿದ್ದೇವೆ. ಈಗ ಬೆಣ್ಣೆತೊರೆ ಮೂಲದಿಂದ ನೀರನ್ನು ಒದಗಿಸಬೇಕೆಂದು ಇಲ್ಲಿಯವರೆಗೆ ಚಿಂತನೆ ನಡಿದಿತ್ತು. ಆದರೆ, ಈ ಮೂಲಕ್ಕೆ ಶಾಶ್ವತವಾಗಿ ನೀರನ್ನು ಒದಗಿಸತಕ್ಕಂಥ ಶಕ್ತಿ ಇದಕ್ಕೆ ಇಲ್ಲ ಎಂಬ ಒಂದು ವಿಚಾರ ಬಂದಿದೆ. ಇದಕ್ಕೆ ಪರ್ಯಾಯವಾಗಿ, ಭೀಮಾ ನದಿಯಿಂದ ನೀರನ್ನು ಒದಗಿಸಿಕೊಡತಕ್ಕಂಥ ಒಂದು ಸೂಚನೆ ಬಂದಿದೆ. ಇದನ್ನು ಪರಿಶೀಲನೆ ಮಾಡಿ, ಭೀಮಾ ನದಿನೀರನ್ನು ಒದಗಿಸಿಕೊಡತಕ್ಕಂಥಾದ್ದರ ಬಗ್ಗೆ ತೀವ್ರವಾದ ಚರ್ಚೆ ಮಾಡಿ, ಇದರ ಬಗ್ಗೆ ನಿರ್ಣಯ ಕೈಗೊಳ್ಳತಕ್ಕಂಥ ವಿಷಯ ಸರಕಾರದ ಮುಂದೆ ಇದೆ. ಅದನ್ನು ಬೇಗ ತೀರ್ಮಾನ ಮಾಡಿ, ಈ ಬವಣೆಯನ್ನು ಶಾಶ್ವತವಾಗಿ ನೀಗಿಸುವುದಕ್ಕೆ ತೀರ್ಮಾನ ಮಾಡುತ್ತೇವೆ ಎಂದುಹೇಳುತ್ತೇನೆ. ಸಧ್ಯ ಇರುವ ನೀರಿನ ಬವಣೆಯನ್ನು ತೀರಿಸುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಆಲ್ಲದೆ ಹಣದ ವ್ಯವಸ್ಥೆಯನ್ನು ಮಾಡಿದ್ದೇವೆ. ಸಾರ್ವಜನಿಕರೂ ಈ ವಿಷಯವನ್ನು ಸಹಾನುಭೂತಿಯಿಂದ ನೋಡಿ, ಈ ಕಷ್ಟಕಾಲದಲ್ಲಿ, ನಗರಪಾಲಿಕೆಯ ಜೊತೆ ಸಹಕಾರದಿಂದ ಇದ್ದು, ಕಷ್ಟವನ್ನು ನೀಗುವುದಕ್ಕೆ ಅವರೂ ಕೂಡಾ ಸಹಾಯ ಮಾಡಬೇಕೆಂದು ನಾನು ಅವರಲ್ಲಿ ವಿನಂವಿ ಮಾಡುತ್ತೇನೆ. ನಮ್ಮ ಕಡೆಯಿಂದ ಏನೇನು ಸಹಾಯ ಬೇಕೋ ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು — ಶ್ರೀ ವಸಂತ ಬಂಗೇರಾ—ಅಸ್ಸೆಂಟ್. ಶ್ರೀ ವಿನಯಕುಮಾರ್ ಸೊರಕೆ

೧೧) ಪುತ್ತೂರು ತಾಲ್ಲೂಕಿನ ವಾರಪತ್ರಿಕೆಯಲ್ಲಿ ಹಿಂದೂ ಧರ್ಮಕ್ಕೆ ಅವಹೇಳನವಾಗುವ ಲೇಖನ ಪ್ರಕಟವಾಗಿರುವ ಬಗ್ಗೆ

ಶ್ರೀ ವಿನಾಯಕುಮಾರ್ ಸೊರಕೆ (ಪುತ್ತೂರು).— ಮಾನ್ಯ ಅಧ್ಯಕ್ಷರೇ, ಪುತ್ತೂರು ತಾಲ್ಲೂಕಿನಲ್ಲಿ ವಾರಪತ್ರಿಕೆಯೊಂದರಲ್ಲಿ ಹಿಂದೂ ಧರ್ಮಕ್ಕೆ ಅವಮಾನವಾಗುವ ರೀತಿಯಲ್ಲಿ ಪತ್ರಿಕೆ ಲೇಖನವೊಂದು ಬಂದಿದ್ದು, ಇದರಿಂದಾಗಿ ಪುತ್ತೂರು ಪರಿಸರದಲ್ಲಿ ಕೋಮು ಸೌಹಾರ್ಧತೆಗೆ ಧಕ್ಕೆ ಬಂದಿದೆ. ಈ ಲೇಖನವನ್ನು ಇಂತಹ ವಾತಾವರಣವನ್ನು ನಿರ್ಮಿಸಲು ಕೆಲವು ಹಿತಾಸಕ್ತ ಕೈವಾಡ ನಡೆದಿದೆ. ಎಂದು ಸಾರ್ವಜನಿಕರಲ್ಲಿ ಅಭಿಪ್ರಾಯ ಮೂಡಿಸಿದೆ, ಅಲ್ಲದೆ ಸಾಕಷ್ಟು ಪ್ರಮಾಣದಲ್ಲಿ ಗಲಭೆ ಕೂಡ ನಡೆದಿದ್ದು ಹಲವಾರು ಮುಗ್ಧ ಜನರಿಗೆ ಹೊಡೆತಗಳು ಬಿದ್ದಿದ್ದು ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುತ್ತಿದ್ದಾರೆ. ಅಲ್ಲದೆ ಈ ಗಲಭೆ ಹೆಚ್ಚು ಪ್ರಮಾಣದಲ್ಲಿ ವ್ಯಾಪಕವಾಗುವ ಸಂಭವ ಇದ್ದು, ಇಂತಹ ಗಲಭೆಗಳ ಹಿಂದಿನ ಕೈವಾಡಗಳ ಬಗ್ಗೆ ಕೂಡಲೇ ತನಿಖೆ ನಡೆಸಿ, ಇದಕ್ಕೆ ಕಾರಣರಾದವರ ಮೇಲೆ ಕಾನೂನಾ ಪ್ರಕಾರ ಕ್ರಮ ಕೈಗೊಳ್ಳುವಂತೆ ಹಾಗೂ ಸಾರ್ವಜನಿಕರಿಗೆ ಸರಿಯಾದ ತಿಳುವಳಿಕೆ ನೀಡುವುದರ ಜೊತೆಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಸರಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ ಸಂಬಂಧಪಟ್ಟ ಮಂತ್ರಿಗಳಿಂದ ಇದಕ್ಕೆ ಉತ್ತರ ತರಿಸಿಕೊಡುತ್ತೇನೆ.

೧೨. ಚಿಂಚೋಳಿ ಸರಕಾರಿ ಕಿರಿಯ ಮಹಾವಿದ್ಯಾಲಯದಲ್ಲಿ ವಿಜ್ಞಾನ ಹಾಗೂ ವಾಣಿಜ್ಯ ವಿಷಯಗಳನ್ನು ಪ್ರಾರಂಭಿಸುವ ಬಗ್ಗೆ.

† ಶ್ರೀ ವೀರಯ್ಯ ಸ್ವಾಮಿ ಮಹಾಲಿಂಗಯ್ಯ (ಚಿಂಚೋಳಿ).—ಮಾನ್ಯ ಅಧ್ಯಕ್ಷರೇ, ಚಿಂಚೋಳಿ ತಾಲ್ಲೂಕು ಕೇಂದ್ರದಲ್ಲಿ ಕಳೆದ ೧೫ ವರ್ಷಗಳಿಂದ ಸರಕಾರಿ ಕಿರಿಯ ಮಹಾ ವಿದ್ಯಾನಿಲಯ ನಡೆಯುತ್ತಿದ್ದು

ಈಗ ಸಂಮಾರು ೩೦೦ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಆದರೆ ಕಿರಿಯ ಮಹಾ ವಿದ್ಯಾಲಯದಲ್ಲಿ ಕೇವಲ ಕಲೆ (ಆರ್ಟ್ಸ್) ವಿಭಾಗ ಮಾತ್ರ ತೆರೆದಿದ್ದು, ವಿಜ್ಞಾನ, ವಾಣಿಜ್ಯ ಅಥವಾ ಇನ್ನಿತರ ತಾಂತ್ರಿಕ ವಿಭಾಗಗಳನ್ನು ತೆರೆಯಲು ಎಷ್ಟೇ ಒತ್ತಾಯ ಹಾಗೂ ಅವಶ್ಯಕತೆ ಇದ್ದರೂ ಸರಕಾರ ಕಿವಿಗೊಡುತ್ತಿಲ್ಲ. ಇದೇ ನಗರದಲ್ಲಿ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯವರು ಕಲೆ ಹಾಗೂ ವಾಣಿಜ್ಯ ವಂಹಾ ವಿದ್ಯಾಲಯ ಪ್ರಾರಂಭಿಸಿದ್ದು, ವಿಜ್ಞಾನ ಭಾಗವನ್ನು ಸಹ ತೆರೆಯಲು ಸಿದ್ಧರಾಗಿದ್ದಾರೆ. ಸದರಿ ಸರಕಾರಿ ಕಿರಿಯ ಮಹಾ ವಿದ್ಯಾಲಯದಲ್ಲಿ ವಿಜ್ಞಾನ ವಿಷಯಕ್ಕೆ ಬೇಕಾಗುವ ಶಿಕ್ಷಣ ಸಾಮಗ್ರಿಗಳು, ಪ್ರಯೋಗಾಲಯ ಹಾಗೂ ಸ್ಥಳಾವಕಾಶ ಲಭ್ಯವಿರುತ್ತವೆ. ಅವಶ್ಯಕತೆಯನ್ನು ಗಮನಿಸಿ ಸರಕಾರ ಕೂಡಲೇ ವಿಜ್ಞಾನ ಹಾಗೂ ವಾಣಿಜ್ಯ ವಿಷಯಗಳನ್ನು ಸ್ಥಳೀಯ ಸರಕಾರಿ ಕಿರಿಯ ವಂಹಾ ವಿದ್ಯಾಲಯದಲ್ಲಿ ಪ್ರಾರಂಭಿಸಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾವಂತ್ರಿಗಳಿಂದ ಉತ್ತರವನ್ನು ತರಿಸಿಕೊಡುತ್ತೇನೆ.

೧೩. ಹುಬ್ಬಳ್ಳಿ-ಧಾರವಾಡದಲ್ಲಿ ಕಂಡಿಯುಪ ನೀರಿನ ಅಭಾವವನ್ನು ನೀಗಲು ನಗರಪಾಲಿಕೆಯವರಿಂದ ರಾಸ್ತರೋಕೋ ವುಷ್ಕರ.

† SRI A. M. HINDUSGERI (Hubli City).—Consequent to the arbitrary stoppage of work of digging borewells to overcome the drinking water scarcity in the Hubli-Dharwad Municipal Corporation areas by the officers of the Karnataka Water Supply and Drainage Board on instructions from the Managing Director of the Karanataka Water Supply and Drainge Board, all the Corporators of HDMC under the leadership of worshipful Mayor resorted to rasta roko to focus the need for urgent digging of bore wells in HDMC area for drinking water supply. They were all arrested inlcuding women Corporators by the police totalling 45 and later on let on bail.

I demand a reply from the Hon'ble Minister of Urban Development what action the Government contemplate to take against Managing Director of KUWDB and other officers for stoppage of work and on the arrest of the Mayor and other Corporators who were agitating for the genuine needs of the public.

SRI A. LAKSHMISAGAR (Minister for Law and Parliamentary Affairs, Food and Civil Supplies and Urban Development).—Sir, to put it shortly, I will look into the matter and take necessary appropriate action. I have not been able to get full details from Hubli-Dharwad. After getting them I will look into it and take appropriate action.